ವಲಯ ಅರಣ್ಯ ಅಧಿಕಾರಿ ಶ್ರೀ ಸುಬ್ರಹ್ಮಣ್ಯ ಮತ್ತು ಫಾರೆಸ್ಟರ್ ನಾಗಪ್ಪ ಎಂಬುವರು ಆನೆಗಳಿಂದ ಬೆಳೆಯನ್ನು ತುಳಿಸಿ ಹಾನಿ ಮಾಡಿರುತ್ತಾರೆ. ಅಲ್ಲದೆ ಮಹಿಳೆಯರ ಮೇಲೆ ಮತ್ತು ಶಾಲಾ ಮಕ್ಕಳ ಮೇಲೆ ಹಲ್ಲೆ ನಡೆಸಿ ಮುಗ್ಧ ರೈತರ ಬಾಳು ಕಣ್ಣೀರ ಕೂಳು ಆಗಿದೆ. ಭಯ ಭೀತರಾದ ಮುಳುಗಡೆ ರೈತರು ತಮ್ಮ ಮನೆ, ಜಮೀನು ಬಿಟ್ಟು ಹೋಗಿರುವ ನಿದರ್ಶನಗಳು ಈಗಾಗಲೇ ಬಂದಿದೆ. ತಮ್ಮ ಬಳಿಗೆಯ ರಕ್ಷಣೆಗಾಗಿ ಈಗ ಈ ರಾಜ್ಯದಲ್ಲಿ ಕಾಂಗ್ರೆಸ್ಸನ್ನು ಗೆಲ್ಲಿಸಿದ ಕಾಂಗ್ರೆಸ್ ಕಾರ್ಯಕರ್ತರಿಗೆ ನರಕ ಯಾತನೆಯಿಂದ ಅತೀವ ಹಿಂಸೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಲೇ ಅಮಾನತ್ತಿನಲ್ಲಿ ಇಟ್ಟು ಮೇಲಂಡ ರೈತರಿಗೆ ರಕ್ಷಣೆ ಕೊಟ್ಟು ಹಾನಿ ಆದ ಬೆಳೆ ಪರಿಹಾರ ಕೊಡಿಸಿಕೊಡಬೇಕೆಂದು ಅಧ್ಯಕ್ಷರ ಮೂಲಕ ಅರಣ್ಯ ಮಂತ್ರಿಗಳಲ್ಲಿ ಆಗ್ರಹ ಪಡಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನೆ ಖಾತೆಯ ಸಚಿವರು).—ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಜಿಲ್ಲೆ, ಹೊಸನಗರ ಕ್ಷೇತ್ರದ ದೋಬೈಲ, ಮಸಕಾನೆ, ಕೋಡಿ, ಆಡಿನಕೊಟ್ಟಿಗೆ ಕಲ್ಲಕೊಪ್ಪ ಮಂಜರಿಕೊಪ್ಪ ಎಂಬ ಊರುಗಳಲ್ಲಿ ಶರಾವತಿ ಪ್ರಾಜೆಕ್ಟ್ ಮುಳುಗಡೆ ರೈತರು ಜಮೀನು ಸಾಗುವಳಿ ಮಾಡುತ್ತಿರುವುದಂ ಅಧಿಕೃತವಾಗಿ ಅಲ್ಲ ಅವರು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾರೆ. ಇದರ ಬಗ್ಗೆ ಶಿವಮೊಗ್ಗ ಉಪ-ಅರಣ್ಯ ಸಂರಕ್ಷಣಾಧಿಕಾರಿಯವರು ಆಗಿನ ಸರ್ಕಾರದ ಆಜ್ಞೆಯಂತೆ ಅತಿಕ್ರಮಣವು ೧೯೭೮ನೇ ಇಸವಿಗಿಂತ ಮುಂಚೆ ಆದ ಕಡೆಗಳಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ—೧೯೮೦ ರ ಪ್ರಕಾರ ಅತಿಕ್ರಮಣವನ್ನು ಸರಿಗೊಳಿಸಲು, ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಈ ಅತಿಕ್ರಮಣ ದಿಂದ ಜಮೀನು ಸಾಗುವಳಿ ಮಾಡತಕ್ಕ ಪ್ರದೇಶ ಶೆಟ್ಟಿಹಳ್ಳಿ ಗೇಮ್ಸ್ ಸ್ಯಾಂಕ್ಚರಿಗೆ ಬರುತ್ತದೆ. ಆದುದರಿಂದ ಅತಿಕ್ರಮಣವನ್ನು ಅಲ್ಲಿ ಸಕ್ರಮಗೊಳಿಸಲು ಕಷ್ಟವಾಗುವುದು. ಆದಕ್ಕಾಗಿ ಶಿವಮೊಗ್ಗ ಜಿಲ್ಲಾಧಿಕಾರಿಯವರು ಮತ್ತು ಉಪ-ಅರಣ್ಯ ಸಂರಕ್ಷಣಾಧಿಕಾರಿ ಶಿವಮೊಗ್ಗ ವಿಭಾಗ, ಶಿವಮೊಗ್ಗ ಇವರು ಶೆಟ್ಟಿಹಳ್ಳಿ ಗೇಮ್ಸ್ ಸ್ಯಾಂಕ್ಚರಿಯಲ್ಲಿ ಆಗಿರತಕ್ಕ ಅತಿಕ್ರಮಣವನ್ನು ಸಕ್ರಮಗೊಳಿಸಲು ಗೇಮ್ಸ್ ಸ್ಯಾಂಕ್ಚರಿಗೆ ಹೊರಗಡೆ ಪ್ರದೇಶದಲ್ಲಿ ಸಾಗುವಳಿ ಮಾಡಲು ಸಾಧ್ಯವೇ ಎಂಬುದನ್ನು ಪರಿಶೀಲಿಸುತ್ತಿದ್ದಾರೆ.

ಅತಿಕ್ರಮಣವು ೧೯೭೮ನೇ ಇಸವಿ ತದ ನಂತರ ಆಗಿದ್ದರೆ ಅದನ್ನು ಸಕ್ರಮಗೊಳಿಸಲು ಆಗುವುದಿಲ್ಲ.

ದೋಬೈಲು ಗ್ರಾಮದ ಹೊಸದಾಗಿ ಅರಣ್ಯ ಜಮೀನಿನಲ್ಲಿ ಅತಿಕ್ರಮಣ ಮಾಡಲಂ ಕೆಲವು ರೈತರು ಪ್ರಯತ್ನಿಸಿದಾಗ, ಅದನ್ನು ಸಿರಿಗೆರೆ ವಲಯ ಅರಣ್ಯಾಧಿಕಾರಿಯವರು ತಪ್ಪಿಸಿರುತ್ತಾರೆ. ಮುಂದೆ ಇಂತಹ ಅತಿಕ್ರಮಣ ಆಗದಿರಲು ಸಿರಿಗೆರೆ ವಲಯದಲ್ಲಿ ದೋಬೈಲು ಗ್ರಾಮದ ಸುತ್ತು ಸುಮಾರು ೫ ಕಿಲೋ ಮೀ. ನಷ್ಟು ಕಂದಕವನ್ನು ತೋಡಿ ಆ ಪ್ರದೇಶದಲ್ಲಿ ಸುಮಾರು ೩೦ ಎಕರೆ ಜಮೀನಿನಲ್ಲಿ ಅರಣ್ಯ ಅಭಿವೃದ್ಧಿಯನ್ನು ತೆಗೆದುಕೊಳ್ಳಲಾಗಿದೆ. ಈ ರೀತಿ ಕಂದಕವನ್ನು ತೋಡುವಾಗ ೧೯೭೮ನೇ ಇಸವಿಗಿಂತ ಮುಂದೆ ಆದ ಅತಿಕ್ರಮಣ ಪ್ರದೇಶವನ್ನು ಬಿಟ್ಟು ಕಂದಕವನ್ನು ತೋಡಿರುತ್ತಾರೆ. ಆದರೆ ಕೆಲವು ರೈತರು ಕಂದಕವನ್ನು ತೋಡಿ ಆದ ಮೇಲೂ ಸಹ ಮತ್ತು ಅರಣ್ಯ ಅಭಿವೃದ್ಧಿ ಕಾರ್ಯವನ್ನು ತೆಗೆದುಕೊಂಡರೂ ಸಹ ಹತ್ತಿ ಬೆಳೆ ಬೆಳೆಯಲು ಅರಣ್ಯ ಪ್ರದೇಶವನ್ನು ಪ್ರವೇಶಿಸಲು ಪ್ರಯತ್ನಿಸಿದವರನ್ನು ವಲಯ ಅರಣ್ಯಾಧಿಕಾರಿಯವರು ಅವರನ್ನು ತಡೆಗಟ್ಟಿದ್ದಾರೆ. ಈ ಪ್ರದೇಶದಲ್ಲಿ ಕೆಲವು ಮರಮಂಟ್ಟುಗಳನ್ನು ಅರಣ್ಯ ಪ್ರದೇಶದಿಂದ ತೆಗೆಯಲು ಅನೆಯನ್ನು ಬಳಸಿಕೊಂಡಿರೇ ವಿನಃ ಯಾವುದೇ ಮಹಿಳೆಯರ ಮೇಲೆ ಅಥವಾ ಶಾಲಾ ಮಕ್ಕಳ ಮೇಲೆ ಹಲ್ಲೆ ನಡೆಸಿರುವುದಿಲ್ಲ.

(ii) ನಂಜನಗೂಡು ತಾಲ್ಲೂಕು ಕುದುರೆ ಗುಂಡಿ ಹಳ್ಳದ ಕಾಮಗಾರಿಯಿಂದ ಮುಳುಗಡೆ ಯಾದ ರೈತರಿಗೆ ಪರಿಹಾರ

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ ನಂಜನಗೂಡು ತಾಲ್ಲೂಕು ಕುದುರೆಗುಂಡಿ ಹಳ್ಳ (ಆಣೆಕಟ್ಟು) ಕಾಮಗಾರಿ ಕೆಲಸ ಕೈಗೊಳ್ಳುವಾಗ ರೈತರ ಜಮೀನು ಮುಳುಗಡೆಯಾಗಿದೆ. ಮುಳುಗಡೆ ಯಾಗಿರುವ ರೈತರ ಜಮೀನುಗಳಲ್ಲಿ ಕೆಲವರಿಗೆ ಪರಿಹಾರ ದೊರಕಿಲ್ಲ. ಆದ್ದರಿಂದ ಕೂಡಲೇ ಪರಿಹಾರ ಕೊಡಲು ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಕುದುರೆಗುಂಡಿ ಆಣೆಕಟ್ಟಿನ ಕೆಲಸ ಕಳಪೆ ಮಟ್ಟದ್ದಾಗಿದೆ ಎಂದು ಸಾರ್ವಜನಿಕ ದೂರು ಬಂದಿದೆ. ಆದ್ದರಿಂದ ಮೇಲ್ಮಟ್ಟದ ಅಧಿಕಾರಿಗಳು ಸಮಗ್ರ ತನಿಖೆ ನಡೆಸಿ ವರದಿ ಪಡೆದ ನಂತರ ಪರಿಶೀಲಿಸಿ ಉಳಿಕೆ ಹಣವನ್ನು ಕಂಟ್ರಾಕ್ಟ್ ದಾರರಿಗೆ ಪಾವತಿ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,

೧. ನಂಜನಗೂಡು ತಾಲ್ಲೂಕಿನ ವಿಶ್ವ ಬ್ಯಾಂಕ್ ನೆರವಿನ ಕುದ್ರಿಗುಂಡಿ ಹಳ್ಳ ಕೆರೆ ನೀರಾವರಿ ಯೋಜನೆಯ ೨೫೪ ಲಕ್ಷ ರೂಪಾಯಿಗಳ ಯೋಜನಾ ವರದಿಗೆ ಜುಲೈ ೧೯೮೩ರಲ್ಲಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಯಿತು. ಈ ಯೋಜನೆಯಿಂದ ೮೧೬ ಹೆಕ್ಟೇರುಗಳ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಲಿದೆ. ಈ ಯೋಜನೆಯ ಅಣೆಕಟ್ಟು ಕಾಮಗಾರಿಗಳನ್ನು ಗುತ್ತಿಗೆದಾರರಾದ ಮೆಸರ್ಸ ಕನ್ಸಾಲಿಡೇಟೆಡ್ ಇಂಜಿನಿಯರಿಂಗ್ ಎಂಟರ್‌ಪ್ರೈಸಸ್ ಇವರಿಗೆ ಎಲ್.ಸಿ.ಬಿ. ಮಾದರಿಯ ಆಧಾರದ ಮೇಲೆ ೧೯೮೩-೮೪ರಲ್ಲಿ ವಹಿಸಲಾಗಿದೆ. ಮಾರ್ಚ ೧೯೯೦ರವರೆಗೆ ಈ ಯೋಜನೆಗೆ ಒಟ್ಟು ೪೨೮ ಲಕ್ಷ ರೂಪಾಯಿಗಳು ವೆಚ್ಚವಾಗಿದೆ. ಅಣೆಕಟ್ಟಿನ ಕಾಮಗಾರಿಗಳು ಮುಗಿದಿದ್ದು ಕಾಲುವೆ ಕೆಲಸಗಳು ನಿರ್ಮಾಣದಲ್ಲಿದೆ.

೨. ಈ ಯೋಜನೆಯಿಂದ ಮುಳುಗಡೆಯಾಗುವ ಜನರಲ್ಲಿ ಶೇಖಡ ೭೫ರಷ್ಟು ಜನರಿಗೆ ಈಗಾಗಲೇ ಪರಿಹಾರಧನ ನೀಡಲಾಗಿದೆ. ಪರಿಹಾರಧನವನ್ನು ನೀಡುವಲ್ಲಿ ಆದ ವಿಳಂಬಕ್ಕೆ ಮುಖ್ಯ ಕಾರಣವೇನೆಂದರೆ ಅವರುಗಳಿಗೆ ಸಾಗುವಳಿಗಾಗಿ ನಿಗದಿಪಡಿಸಲಾದ ಸರ್ವೆ ನಂಬರ್‌ಗಳಿಗೆ ಬದಲಾಗಿ ಅವರು ಗಳು ಬೇರೆಯೇ ಸರ್ವೆ ನಂಬರ್‌ಗಳಲ್ಲಿ ಸಾಗುವಳಿ ಮಾಡುತ್ತಿದ್ದರು. ಇದನ್ನು ಸರಿಪಡಿಸುವ ಸಲುವಾಗಿ ತಹಶೀಲ್ದಾರರ ಗಮನಕ್ಕೆ ಈ ವಿಷಯವನ್ನು ತರಲಾಗಿದೆ.

೩. ಕಾಮಗಾರಿಗಳನ್ನು ಬಹಳ ಎಚ್ಚರಿಕೆಯ ಮೇಲುಸ್ತುವಾರಿ ಮತ್ತು ಗುಣ ನಿಯಂತ್ರಕ್ಕೆ ಒಳಪಟ್ಟು ಮಾಡಲ್ಪಟ್ಟು ಮೇಲಧಿಕಾರಿಗಳಿಂದ ಆಗಿಂದಾಗ್ಗೆ ಸ್ಥಳ ಪರೀಕ್ಷೆ ಮಾಡಲ್ಪಟ್ಟಿವೆ. ತೃಪ್ತಿ ಕರವಲ್ಲದ ಕಾಮಗಾರಿಗಳು ಕಂಡು ಬಂದ ತಕ್ಷಣವೇ ಅವುಗಳನ್ನು ಸರಿಪಡಿಸುವಲ್ಲಿ ಸೂಕ್ತಕ್ರಮವನ್ನು ಆಗಾಗ್ಗೆ ತೆಗೆದಂಕೊಳ್ಳಲಾಗಿದೆ. ಈ ಸಂಬಂಧದಲ್ಲಿ ನಿರ್ದಿಷ್ಟ ಹಾಗೂ ನಿಖರವಾದ ದೂರುಗಳು ಬಂದಲ್ಲಿ ಸೂಕ ವಾದ ತನಿಖೆ ನಡೆಸಲಾಗುವುದು.

(iii) ಜಿಲ್ಲಾ ಪರಿಷತ್ತುಗಳು ಪ್ರಾರಂಭಿಸಿದ ಪ್ರೌಢ ಶಾಲೆಗಳಿಗೆ ಸರ್ಕಾರದ ಮಂಜೂರಾತಿ

ಶ್ರೀ ಎ. ಬಸವರಾಜ್.—ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪರಿಷತ್ತುಗಳು ಪ್ರಾರಂಭಿಸಿದ ಹೈಸ್ಕೂಲುಂ ಗಳಿಗೆ ಸರ್ಕಾರ ಇನ್ನೂ ಮಂಜೂರಾತಿ ನೀಡಿಲ್ಲ. ಯಾವುದೋ ಪ್ರೌಢ ಶಾಲೆಯಿಂದ ಪ್ರತಿನಿಯುಕ್ತಿ ಹೊಂದಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸುತ್ತಿರುವವರನ್ನು ಬಿಟ್ಟರೆ ಬೇರೆ ಶಿಕ್ಷಕರ ಮಂಜೂರಾತಿ ಯಾಗಿಲ್ಲ, ಅರೆಕಾಲಿಕ ಅಧ್ಯಾಪಕರ ನೆರವಿನಿಂದ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಮುಂದಿನ ವರ್ಷಾರ್ಥಿಂಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿದೆ. ಮಂಜೂರಾತಿ ನೀಡದಿದ್ದಲ್ಲಿ ಮಾನ್ಯತೆ ದೊರಕದೆ ಸಹಸ್ರಾರು ವಿದ್ಯಾರ್ಥಿಗಳ ಪರಿಸ್ಥಿತಿ ಡೋಲಾಯಮಾನವಾಗುತ್ತದೆ. ಆದ್ದರಿಂದ ಈ ವಿಚಾರವನ್ನು ತಕ್ಷಣ ಪರಿಶೀಲಿಸಿ ಶೀಘ್ರ ಮಂಜೂರಾತಿ ನೀಡಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ,

ಜಿಲ್ಲಾ ಪರಿಷತ್ತುಗಳು ಪ್ರೌಢ ಶಾಲೆಗಳನ್ನು ತೆರೆಯುವ ಬಗ್ಗೆ ಸರ್ಕಾರದಿಂದ ದಿನಾಂಕ ೧೨-೯-೧೯೯೯ ರಂದು ಮಾರ್ಗದರ್ಶನಗಳನ್ನು ನೀಡಿದೆ. ಮತ್ತು ಸರ್ಕಾರಿ ಸುತ್ತೋಲೆ ದಿನಾಂಕ ೨೫-೫-೯೦ರಲ್ಲಿ ಅಂತಹ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಹೇಗೆ ಕಳುಹಿಸಬೇಕೆಂದು ತಿಳಿಸಲಾಗಿದೆ; ಈ ಮಾರ್ಗದರ್ಶನಗಳನ್ನು ಹಾಗೂ ಸುತ್ತೋಲೆ ಪ್ರಕಾರ ಇಲ್ಲದ ಪ್ರಸ್ತಾವನೆಗಳನ್ನು ಪುನರ್ ಪರಿಶೀಲಿಸಲು ಜಿಲ್ಲಾ ಪರಿಷತ್ತುಗಳಿಗೆ ಹಿಂದಕ್ಕೆ ಕಳುಹಿಸಲಾಗಿದೆ.

ಹೊಸ ಸರ್ಕಾರಿ ಹಾಗೂ ಖಾಸಗೀ ಪ್ರೌಢ ಶಾಲೆಗಳನ್ನು ಜಿಲ್ಲಾ ಪರಿಷತ್ತುಗಳು ತೆರೆಯುವ ಬಗ್ಗೆ ಸಧ್ಯದಲ್ಲೇ ಒಂದು ಸಭೆಯನ್ನು ಕರೆದು ಚರ್ಚಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು, ೨೮-೨-೯೯ಕ್ಕೆ ಎಲ್ಲಾ ಅಧ್ಯಕ್ಷರುಗಳ ಸಭೆ ಕರೆದಿದ್ದೇನೆ. ತದನಂತರ ತೀರ್ಮಾನ ತೆಗೆದುಕೊಳ್ಳುತ್ತೇನೆ.

iv ಖಾನಾಪುರ ಮತ್ತು ಬೈಲಹೊಂಗಲ ತಾಲ್ಲೂಕುಗಳಲ್ಲಿ ದರೋಡೆಕೋರರ ಹಾವಳಿ

ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲ್ಲೂಕಿನ ಬಾಗೇವಾಡಿ, ಬಡಸಾ, ಖಾನಾಪೂರ ತಾಲ್ಲೂಕಿನ ಪಾರಿಶ್ವಾಡ ಚಿಕ್ಕಹಟ್ಟಿ ಹೂಳಿ ಮತ್ತು ಬೈಲಹೊಂಗಲ ತಾಲ್ಲೂಕಿನ ಗಿರಿಯಾಳ ಗ್ರಾಮಗಳಲ್ಲಿ ದರೋಡೆ ಗ್ಯಾಂಗುಗಳ ಹಾವಳಿ ಹೆಚ್ಚಾಗಿದೆ.